# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

**ನಂ.16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080.**
**080-22205189/93, ಇ-ಮೇಲ್: sec.karnataka@ka.gov.in**

ಸಂಖ್ಯೆ: SECK/ULB/GELN(GBA)/1/2025-ULB E-247649 ದಿನಾಂಕ: 24-11-2025

## -: ಪರಿಷ್ಕೃತ ಸುತ್ತೋಲೆ :-

ವಿಷಯ : ಗ್ರೇಟರ್ ಬೆಂಗಳೂರು ಪ್ರಾಧಿಕಾರದ 05 ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸುವ ಬಗ್ಗೆ ಸೂಚನೆಗಳು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 289 ಬಿಬಿಎಸ್ 2025, ಸಂಖ್ಯೆ: ನಅಇ 290 ಬಿಬಿಎಸ್ 2025, ಸಂಖ್ಯೆ: ನಅಇ 291 ಬಿಬಿಎಸ್ 2025, ಸಂಖ್ಯೆ: ನಅಇ 292 ಬಿಬಿಎಸ್ 2025 ಮತ್ತು ಸಂಖ್ಯೆ: ನಅಇ 293 ಬಿಬಿಎಸ್ 2025 ದಿನಾಂಕ: 19.11.2025
2. ಆಯೋಗದ ಅಧಿಸೂಚನೆ ಸಂಖ್ಯೆ: SECK/ULB/GELN(GBA) /1/2025-ULB E-247649, ದಿನಾಂಕ: 13.10.2025.
3. ಆಯೋಗದ ಸಮಸಂಖ್ಯೆಯ ಸುತ್ತೋಲೆ ದಿನಾಂಕ: 27.10.2025

-*-*-

ರಾಜ್ಯ ಚುನಾವಣಾ ಆಯೋಗವು ಭಾರತ ಸಂವಿಧಾನದ 74ನೇ ತಿದ್ದುಪಡಿಯ ಪರಿಚ್ಛೇದ 243-ಜಡ್ಎ ಹಾಗೂ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಪ್ರಕರಣ 35 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ಬರುವ 5 ನಗರ ಪಾಲಿಕೆಗಳ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸುವ ಸಲುವಾಗಿ, ಮತ್ತು ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು, 2025ರ ನಿಯಮ 03 ಮತ್ತು 04 ಹಾಗೂ ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025ರ ನಿಯಮ 03 ರನ್ವಯ ಗ್ರೇಟರ್ ಬೆಂಗಳೂರು ಪ್ರಾಧಿಕಾರದ 5 ನಗರ ಪಾಲಿಕೆಗಳ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸಬೇಕಾಗಿರುತ್ತದೆ.

ವಾರ್ಡುವಾರು ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಕುರಿತು, ಜಿಲ್ಲಾ ಚುನಾವಣಾಧಿಕಾರಿ ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಉಲ್ಲೇಖ (3)ರ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಾರ್ವತ್ರಿಕ ಚುನಾವಣೆ ನಡೆಸುವ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ SLP(C) 15181/2020 ರಲ್ಲಿ ದಿನಾಂಕ: 03.11.2025 ಆದೇಶದನ್ವಯ ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರದ 5 ನಗರ ಪಾಲಿಕೆಗಳ ವಾರ್ಡುವಾರು ಕ್ಷೇತ್ರ ಪುನರ್ ವಿಂಗಡಣೆಯನ್ನು ಮಾಡಿ ಉಲ್ಲೇಖ (1)ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಿರುವ ಹಿನ್ನೆಲೆಯಲ್ಲಿ, ವಾರ್ಡುವಾರು ಮತದಾರರ ಪಟ್ಟಿ ಸಿದ್ಧಪಡಿಸಲು ಈ ಹಿಂದೆ ಉಲ್ಲೇಖ (3) ರಲ್ಲಿ ನೀಡಲಾಗಿದ್ದ ಮತದಾರರ ಪಟ್ಟಿ ಸಿದ್ಧತಾ ಕಾರ್ಯಕ್ರಮ ಪಟ್ಟಿಯನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಕಾರ್ಯಕ್ರಮ ಪಟ್ಟಿ ನಿಗದಿಪಡಿಸಿದೆ.

| Sl. No. | Pre-revision activities | Time Schedule | No. of days |
|---|---|---|---|
| 1 | Training for EROs, AEROs and BLOs on preparation of From-To Matrix by adopting Assembly Electoral Rolls. (Each City Corporation wise) | 27.11.2025 to 29.11.2025 | 3 |
| 2 | Identifying the voters in the Assembly Electoral Rolls by Visiting only the houses on the edge of the ward boundary line as per the ward wise delimitation notification through BLO. | 30.11.2025 to 06.12.2025 | 7 |
| 3 | Filling the format in From-To Matrix and Header Page in Excel sheet. | 07.12.2025 to 09.12.2025 | 3 |
| 4 | E roll Generation | 10.12.2025 to 14.12.2025 | 5 |
| 5 | Printing of 1st Checklist | 15.12.2025 to 19.12.2025 | 5 |
| 6 | Verification of left out & Repeated Electors and any other errors in the 1st Check List | 20.12.2025 to 23.12.2025 | 4 |
| 7 | Authentication of Re-organized parts (Split parts) | 24.12.2025 | 1 |
| 8 | Ward wise Electoral Rolls 2nd Checklist | 25.12.2025 to 31.12.2025 | 7 |
| 9 | Verification of 2nd Checklist as per ward wise Electoral Rolls | 01.01.2026 to 04.01.2026 | 4 |
| 10 | Draft E roll Generation | 05.01.2026 to 07.01.2026 | 3 |
| 11 | Approval for printing of ward wise Draft Electoral Rolls | 08.01.2026 to 17.01.2026 | 10 |
| | **Revision Activities** | | |
| 12 | **Publication of Ward wise Draft Electoral Roll** | **19.01.2026** | 2 |
| 13 | House to house Verification through BLOs and period for filing Claims and Objections | 20.01.2026 to 03.02.2026 | 15 |
| 14 | Disposal of Claims and Objections | 04.02.2026 to 18.02.2026 | 15 |
| 15 | Ward wise Electoral Rolls Final Checklist | 19.02.2026 to 23.02.2026 | 5 |
| 16 | Verification of Final checklist as per ward wise Electoral Rolls | 24.02.2026 to 27.02.2026 | 4 |
| 17 | Final E roll Generation | 28.02.2026 to 04.03.2026 | 5 |
| 18 | Approval for printing of ward wise Final Electoral Roll | 05.03.2026 to 14.03.2026 | 10 |
| 19 | **Final Publication of Ward wise Electoral Roll** | **16.03.2026** | 2 |
| | | | **110** |

ಉಲ್ಲೇಖ(3)ರ ಸುತ್ತೋಲೆಯಲ್ಲಿನ ಸೂಚನೆಗಳನ್ನು ಅನುಸರಿಸಿ ಮೇಲಿನ ಕಾರ್ಯಕ್ರಮದ ಪಟ್ಟಿಯಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ 5 ನಗರ ಪಾಲಿಕೆಗಳ ವಾರ್ಡುವಾರು ಮತದಾರರ ಪಟ್ಟಿಯನ್ನು ನಿಗದಿತ ಅವಧಿಯೊಳಗೆ, ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಸಂಬಂಧಿಸಿದ ಆಯಾ ನಗರಪಾಲಿಕೆಯ ಆಯುಕ್ತರು ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿಗಳು ಅತ್ಯಂತ ಜಾಗರೂಕತೆಯಿಂದ ಎಚ್ಚರಿಕೆ ವಹಿಸಿ

ಕಾರ್ಯನಿರ್ವಹಿಸುವುದು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ 5 ನಗರ ಪಾಲಿಕೆಗಳ ವಾರ್ಡುವಾರು ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಿಸಿದ ಜಿಲ್ಲಾ ಚುನಾವಣಾಧಿಕಾರಿಗಳು / ಅಪರ ಜಿಲ್ಲಾ ಚುನಾವಣಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

Digitally signed by
NARAPPA REVANASIDDAPPA NAGARAJU
Date: 24-11-2025 15:02:27

ಕಾರ್ಯದರ್ಶಿ (ಪ್ರ),
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ,**

1) ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು.
2) ವಿಶೇಷ ಆಯುಕ್ತರು (ಚುನಾವಣೆ), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು
3) ವಿಶೇಷ ಕರ್ತವ್ಯ ಅಧಿಕಾರಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು
4) ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಕೇಂದ್ರ ನಗರಪಾಲಿಕೆ,
5) ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಪೂರ್ವ ನಗರಪಾಲಿಕೆ,
6) ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಪಶ್ಚಿಮ ನಗರಪಾಲಿಕೆ,
7) ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಉತ್ತರ ನಗರಪಾಲಿಕೆ,
8) ಆಯುಕ್ತರು ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ದಕ್ಷಿಣ ನಗರಪಾಲಿಕೆ,
9) ಸಹಾಯಕ ಆಯುಕ್ತರು (ಚುನಾವಣೆ), ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು